
ನಗು ಬೀರುತ್ತಾನೆ. ಯಾರೇ ಆಗಲಿ ಗುರುತು ಪರಿಚಯವಿಲ್ಲದವರು ಹೀಗೆಲ್ಲ ಎದುರಿಗೆ ಸಿಕ್ಕಾಗ ಗುರುತಿದ್ದವರಂತೆ ಮುಗುಳು ನಗು ಬೀರುವುದಿಲ್ಲ ಎನ್ನುವುದು ನನ್ನ ಭಾವನೆಯಾಗಿತ್ತು.

ದಿನವೂ ಅವನು ಎದುರಿಗೆ ಸಿಕ್ಕು ಸರಿದು ಹೋಗುತ್ತಿದ್ದಂತೆ ಯೋಚಿಸುತ್ತಿದ್ದೆ. ನೆನಪು ಮಾಡಿಕೊಳ್ಳಲು ಯತ್ನಿಸುತ್ತಿದ್ದೆ. ಅದು ಕೆಲ ಕ್ಷಣ ಮಾತ್ರ. ಶಿಕ್ಷಕಿ ವೃತ್ತಿಯಲ್ಲಿರುವ ನಾನು ಮತ್ತದನ್ನಲ್ಲಿಗೆ ಮರೆತು ನನ್ನ ಕೆಲಸದ ಕಡೆಗೆ ಗಮನ ಕೊಡುತ್ತ ನನ್ನ ಬದುಕನ್ನು ಹಸನಾಗಿಸಿಕೊಂಡಿದ್ದೆ. ಏನಿದೆ ಬದುಕಿನಲ್ಲಿ ಅಪ್ಪ ಅಮ್ಮ ಇಲ್ಲ, ಮದುವೆಯಾಗಿಲ್ಲ ಹೋಗಲಿ ಎಂದರೆ ಹಿಂದೆ ಮುಂದೆ ನನಗೆ ಯಾರೂ ಇಲ್ಲ. ಆದರೂ ಎಂದೂ ನನಗೆ ನಾನು ಒಂಟಿ ಪಿಶಾಚಿ ಎಂದು ಅನಿಸಿದ್ದೇ ಇಲ್ಲ. ಒಂಟಿಯಾದರೇನು ಬದುಕುವ ಛಲವಿತ್ತು. ಶಾಲೆಯ ಮಕ್ಕಳ ಪ್ರೀತಿಗೆ ಮೈಮರೆತು ಹೋಗುತ್ತಿದ್ದೆ. ಶಿಕ್ಷಕರ ದಿನಾಚರಣೆಯ ದಿನದಂದು ಶಾಲೆಯ ಎಲ್ಲಾ ಮಕ್ಕಳು ಗುಲಾಬಿ ಹೂವನ್ನು ತಂದು ಕೊಡುವುದನ್ನು ನೋಡಿದಾಗ ನನ್ನ ಮನಸ್ಸು ಹೆಮ್ಮೆಯಿಂದ ಬೀಗುತ್ತಿತ್ತು. ಎಂಥ ಹೆಮ್ಮೆಯ ವೃತ್ತಿಯಿದು. ಚೆನ್ನಾಗಿ ಕಲಿಸಿ ಕೊಡುವ ಶಿಕ್ಷಕಿಯನ್ನು ಮಕ್ಕಳು ಎಷ್ಟು ಪೀತಿಸುತ್ತವೆ ಎನ್ನುವುದಕ್ಕೆ ನಾನೇ ಸಾಕ್ಷಿಯಾಗಿದ್ದೆ. ಶಿಕ್ಷಕರ ಪ್ರಶಸ್ತಿಯೂ ನನಗೆ ಲಭ್ಯವಾಗಿತ್ತು. ನಾನು ಪ್ರಶಸ್ತಿಯನ್ನು ಪಡೆದು ಬಂದ ಮೇಲೆ ಮಕ್ಕಳೆಲ್ಲಾ ನನ್ನನ್ನು ಮುತ್ತಿಕೊಂಡು ಅಭಿನಂದಿಸಿದ್ದುವು. ಎಲ್ಲಕ್ಕಿಂತ ದೊಡ್ಡದು ಎಂದು ನನಗೆ ಕಾಣುತ್ತಿದ್ದುದು ನನ್ನ ಮೇಲಿನ ಮಕ್ಕಳ ಪ್ರೀತಿ.

ಮಕ್ಕಳಿಗೆ ಕಲಿಸಿಕೊಡುವುದರ ಜೊತೆ ನಾನು ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದೆ. ಅಂದು ದುಂಡಗೆ ಕೆಂಪು ಕೆಂಪಗೆ ಇದ್ದ ನಿಶಿ ಸತ್ತಾಗ ನಾನು ಎಷ್ಟೊಂದು ಅತ್ತಿದ್ದೆ. ಕಣ್ಣಲ್ಲಿ ತುಂಬಿ ಬಂದ ನೀರು ಎದೆಯನ್ನು ತೋಯ್ದಿಸಿತ್ತು. ಬೆಳಗಿಂದ ಸಂಜೆಯವರೆಗೂ ಅವಳನ್ನು ನೆನೆದು ಕಣ್ಣೀರು ಸುರಿಸಿದ್ದೆ. ಅವಳು ಸತ್ತ ನೆನಪು ಯಾವತ್ತೂ ಮಾಸಿರಲಿಲ್ಲ. ನಿಶಿಯ ನೆನಪು ಬಂದಾಗಲೆಲ್ಲಾ ಕಣ್ಣೀರಿಟ್ಟು ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದೆ. ನನ್ನ ಅಂತಃಕರಣ ನೋಡಿಯೇ ಇರಬಹುದು ಮಕ್ಕಳು ನನ್ನ ತೀರ ಸಮೀಪವರ್ತಿ ಯಾಗುತ್ತಿದ್ದರು. ಸಲಿಗೆಯಿಂದ ತಮ್ಮ ಅಮ್ಮನೊಂದಿಗೆ ವರ್ತಿಸುವಂತೆ ವರ್ತಿಸುತ್ತಿದ್ದುವು. ಈ ಮಕ್ಕಳ ಮಧ್ಯೆ ನಾನು ಒಂಟಿ ಎಂದು ನನಗನಿಸಬಹುದೇ? ಖಂಡಿತ ಎಂದೂ ಅನಿಸಿಲ್ಲ. ಇದರ ಮಧ್ಯೆ ಅವನು ದಾರಿಯಲ್ಲಿ ಸಿಕ್ಕಾಗ ಮಕ್ಕಳಲ್ಲದೆ ಇನ್ನೂ ಯಾರೋ ಒಬ್ಬ ನನ್ನ ಹಿತೈಸಿ ಇದ್ದಾನೆ ಎನಿಸಿ ಹೃದಯ ತುಂಬುತ್ತಿತ್ತು. ಅವನನ್ನು ನಿಲ್ಲಿಸಿ, 'ಯಾರು ನೀವು' ಎಂದು ಕೇಳಬೇಕೆಂಬ ಮನಸ್ಸಿದ್ದರೂ ಯಾಕೋ ಸಂಕೋಚ ಎದುರು ಬಂದು ನಿಲ್ಲುತ್ತಿತ್ತು. ಹೋಗಲಿ ಎಂದರೆ ಅವನೂ ಮರೆತ ನೆನಪನ್ನು ಜ್ಞಾಪಿಸಲು ತಯಾರಿಲ್ಲ. ಎಂದಿನಂತೆ ಅವನು ಎದುರಿಗೆ ಬಂದ, ಕೇಳಲೇ



ಎಂದುಕೊಂಡೆ. ಅವನೆ ಮುಂದೆ ಹಾದು ಹೋಗುತ್ತಿದ್ದವನು ನನ್ನೆದುರಿಗೆ ನಿಂತು, 'ಹಾಯ್' ಎಂದ.

ನಾನು ಕೂಡ 'ಹಾಯ್' ಎಂದೆ.

'ನೀನು ಯಾರು? ನಿನ್ನ ನೆನಪು ಬರುತ್ತಿಲ್ಲ. ಹೆಸರು ಹೇಳಿದರೆ ಗೊತ್ತಾಗ ಬಹುದು' ಎಂದು ಕೇಳಲು ಅವನಿಲ್ಲ. ಆಗಲೇ ಅವನು ಅಷ್ಟು ದೂರದಲ್ಲಿ ನಡೆದು ಹೋಗುತ್ತಿದ್ದ. ಹೆಸರು ಹಿಡಿದು ಕರೆಯಲು ಹೆಸರು ಗೊತ್ತಿಲ್ಲ. ಹಾಯ್ ಎನ್ನುತ್ತ ಅವನು ಮುಂದೆ ನಡೆದೇ ಬಿಟ್ಟಿದ್ದ, ನಾನು ಹಿಂತಿರುಗಿ ನೋಡಿದೆ. ಅವನು ಅಷ್ಟು ದೂರದಲ್ಲಿದ್ದ. ಬಿಡು ನನಗೂ ಅವನಿಗೂ ಏನು ಸಂಬಂಧ ಎಂದುಕೊಂಡು ಶಾಲೆಯ ಕಡೆಗೆ ಬಿರಬಿರನೆ ಹೆಜ್ಜೆ ಹಾಕಿದೆ. ಆದರೂ ಏಕೋ ನೆನಪು ಮಾಡಿಕೊಳ್ಳಲು ಹವಣಿಸಿತು ನನ್ನ ಮನಸ್ಸು. ನೆನಪಿಗೆ ಬರಲಿಲ್ಲ. ನಾಳೆ ಇದೇ ದಾರಿಯಲ್ಲಿ ಸಿಗುತ್ತಾನಲ್ಲ ಕೇಳಿ ನೋಡೋಣ ಎಂದುಕೊಂಡು ಶಾಲೆಗೆ ಬಂದೆ. ಮರುದಿನ ಅವನು ಎದುರಿಗೆ ಸಿಕ್ಕ, ಕೇಳಿದ.

'ನನ್ನ ನೆನಪು ನಿನಗಿಲ್ವ ಸೌಮ್ಯ, ನೆನಪು ಮಾಡಿಕೋ' ಎಂದು ಮತ್ತೆ ಅವನು ನಿಲ್ಲದೆ ಹೊರಟು ಹೋದ. ಅವನೆಲ್ಲೋ ಕೆಲಸಕ್ಕಿದ್ದಾನೆ. ಶಿಸ್ತನ್ನು ಇಟ್ಟುಕೊಂಡಿದ್ದಾನೆ. ತಡವಾಗಿ ಹೋಗಲಾರ ಅದಕ್ಕೆ ದಾರಿಯಲ್ಲಿ ಸಿಕ್ಕ ನನ್ನೊಂದಿಗೆ ನಿಂತು ಮಾತನಾಡುವುದಿಲ್ಲ ಎಂದುಕೊಂಡೆ, ಅದು ನಿಜವೂ ಆಗಿತ್ತು. ಮರುದಿನ ಸಿಕ್ಕ ಅವನು..

'ನೆನಪಿಗೆ ಬರಲಿಲ್ವ ಒಂದು ದಿನ ಟೈಮ್ ಕೊಟ್ಟಿದ್ದೆ' ಎಂದು ಕೇಳಿದ. 'ಬರದಿದ್ದರೆ ನಾಳೆ ನಾನೇ ಹೇಳುತ್ತೇನೆ. ಇವತ್ತು ಆಫೀಸಿನಲ್ಲಿ ಹೇಳಿ ಬಂದಿಲ್ಲ. ನಾಳೆ ಸ್ವಲ್ಪ ತಡವಾಗಿ ಬರುತ್ತೇನೆ ಎಂದು ಹೇಳಿ ಬರುತ್ತೇನೆ' ಎಂದು ಮಾತಿಗೆ ನಿಲ್ಲದೆ ಹೊರಟು ಹೋದ. ನನ್ನ ನೆನಪು ಅವನಿಗಿರುವುದರಿಂದಲೇ ಅವನು ನನ್ನನ್ನು ಸೌಮ್ಯ ಎಂದು ಕರೆದಿದ್ದಾನೆ. ನನ್ನ ನಿಜನಾಮಧೇಯ ಅವನಿಗೆ ಗೊತ್ತಿರಬೇಕಾದರೆ ನಾನು ಅವನನ್ನು ಮರೆಯಬಹುದೇ ಎಂದುಕೊಂಡು, ಆ ನಾಳೆಗಾಗಿ ನಾನು ಕಾದೆ. ಆ ನಾಳೆ ಮತ್ತೆ ಬರಲೇ ಇಲ್ಲ. ಮತ್ತೆಂದೂ ಅವನು ಸಿಗದೇ ಹೋದ. ನಾನು ಅವನನ್ನು ಮರೆತು ಬಿಟ್ಟದ್ದು ಅವನಿಗೆ ನೋವನ್ನುಂಟು ಮಾಡಿರಬೇಕು. ಅಥವಾ ನಾನು ಅವನನ್ನು ಪೂರ್ತಿ ಮರೆತು ಬಿಡಲಿ ಎಂದಿರ ಬಹುದು ನನ್ನ ಕಣ್ಣಿಂದ ಮರೆಯಾಗಿ ಬಿಟ್ಟ ಎಂದು ಯೋಚಿಸುತ್ತಿದ್ದೆ. ಒಂದು ದಿನ ಇದ್ದಕ್ಕಿದ್ದಂತೆ ಅವನ ನೆನಪು ತಟ್ಟನೆ ಬಂತು. ಹೌದು ಅವನು ಶಶಿಧರ.

ಹಳ್ಳಿಯಲ್ಲಿ ನಮ್ಮ ನೆರೆಯಲ್ಲಿದ್ದವನು. ಇಬ್ಬರೂ ಮರಕೋತಿ ಆಟ ಆಡುತ್ತಿದ್ದೆವು. ಚೆಂಡುರುಳಿಸಿ ಜಗಿಯುತ್ತಿದ್ದೆವು. ಒಳ್ಳೆ ಗಂಡು ಬೀರಿ ಎಂದು ಅಮ್ಮ ಬೈಯುತ್ತಿದ್ದಳು. ಇವಳನ್ನು ಸುಧಾರಿಸೋಕೆ ನನ್ನಿಂದಾಗೋಲ್ಲ ಕಣೋ, ನಿಂಗೆ ಮದುವೆ ಮಾಡಿಕೊಟ್ಟು ಬಿಡ್ತೇನೆ. ಹ್ಯಾಗೆ ಸುಧಾರಿಸುತ್ತಿಯೋ ನಿಂಗೆ ಬಿಟ್ಟದ್ದು' ಎಂದು ಅಮ್ಮ ಅನ್ನುತ್ತಿದ್ದಳು. ಒಂದೆರಡು ವರ್ಷದಲ್ಲಿ ಅವನ ಅಪ್ಪನಿಗೆ ವರ್ಗಾವಣೆಯಾಗಿ ಅವರು ಹಳ್ಳಿ ಬಿಟ್ಟು ದೂರ ಹೊರಟು ಹೋಗಿದ್ದರು. ಅವರ ಹಿಂದೆ ಶಶಿಧರನು ಹೊರಟು ಹೋದ. ಆಗಿನ್ನೂ ನನಗೆ ಎಂಟು ವರ್ಷ, ತುಂಟಾಟದಲ್ಲಿ ನಿಸ್ಸೀಮಳಾಗಿದ್ದ ನಾನು ಬೇರೆ ಗೆಳೆಯರ ಜೊತೆಗೆ ಅವನನ್ನು ಮರತೇ ಬಿಟ್ಟಿದ್ದೆ. ಈಗ ಅವನು ವಯಸ್ಸಿಗೆ ತಕ್ಕಂತೆ ಬದಲಾಗಿದ್ದ. ನಾನು ಬದಲಾಗಿದ್ದರೂ ಅವನು ಗುರುತಿಸಿದ್ದು ಹೇಗೆ ಎಂದು ಯೋಚಿಸಿದೆ. ನಿಜ ಅವನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದ. ಅದಕ್ಕೇ ಇರಬಹುದು ಅವನು ನನ್ನನ್ನು ಮರೆತು ಬಿಡಲಿಲ್ಲ. ಈಗ ಅವನು ನೆನಪನ್ನು ನನಗೆ ತಂದುಕೊಡಬಹುದಿತ್ತು. ಯಾಕೋ ಕೊಡದೆ ಹೋದ ಎಂದು ಅಂದುಕೊಳ್ಳುತ್ತಿರುವಾಗಲೆ ನನ್ನ ಮನಸ್ಸಿಗೆ ಒಂದು ವಿಷಯ ಗೊತ್ತಾಗಿ ಹೋಯಿತು.

'ಗೊತ್ತಾಯಿತು ಬಿಡೋ ಶಶಿ, ನಿನಗೀಗ ಮದುವೆಯಾಗಿದೆ. ಮಕ್ಕಳು ಆಗಿರಬಹುದು, ಇದನ್ನೆಲ್ಲಾ ನನ್ನ ಹತ್ತಿರ ಹೇಳಲು ನಿನಗೆ ಮನಸ್ಸಿಲ್ಲದಿರಬಹುದು. ನನಗೂ ಕೇಳಲು ಮನಸ್ಸಿಲ್ಲ. ನೀನು ಹಾಗೆ ಏನನ್ನೂ ಹೇಳದೆ ಹೋಗಿರೋದು ನಿನಗೂ ಕ್ಷೇಮ, ನನಗೂ ಕ್ಷೇಮ ಎಂದುಕೊಳ್ಳುತ್ತ, ಅದನ್ನಲ್ಲಿಗೆ ಬಿಟ್ಟು ಶಾಲೆಯ ನೆನಪು ಬಂದುದರಿಂದ ಲಗುಬುಗೆಯಿಂದ ಬಟ್ಟೆ ಬದಲಿಸಿ ಹೊರಟು ನಿಂತೆ. ಮಕ್ಕಳ ಫಲಿತಾಂಶ ಪ್ರಕಟವಾಗಿತ್ತು. ಎಲ್ಲಾ ಮಕ್ಕಳು ನನ್ನನ್ನು ಸುತ್ತುವರೆದು ಸಿಹಿ ಹಂಚಿದರು. 'ಶಶಿ ನಿನಗಿದು ಗೊತ್ತಿಲ್ಲ, ನನಗೆ ನಿನಗಿಂತಲೂ ಈ ಶಾಲೆ, ಶಾಲೆಯ ಮಕ್ಕಳು ಮುಖ್ಯ ಕಣೊ' ಎಂದು ಗೊಣಗಿಕೊಳ್ಳುತ್ತ ಕಣ್ಣೊರೆಸಿಕೊಂಡೆ.